ಸುರಿಯುತ್ತಿರುವೆ, ಮೈ ಮೇಲೆ ಅದೆಷ್ಟು ಚಿನ್ನ ಬಣ್ಣ ತೂಗಿಸಿರುವೆ. ನನ್ನ ತಲೆಯ ಮೇಲೆ ಯಾವತ್ತು ಮಣ್ಣು ಸುರಿಯಬೇಕೆಂದಿರುವೆ' ಎನ್ನಲು, ಗಂಡ ಹೆಂಡತಿಯ ಮೇಲೆ ಕೈ ಮಾಡಲು ಹೋದ. ಹೆಂಗಸು ಗಂಡಸಿನ ತಲೆಗೆ ಮೊಸರ ಕಡೆಗೋಲಿನಿಂದ ಬಲವಾಗಿ ಬಾರಿಸಿಬಿಟ್ಟಳು. ಅವನು ಅಲ್ಲೇ ರಕ್ತಕಾರಿ ಸತ್ತ. ಊರಗೌಡನ ಸಾವಿನ ಸುದ್ದಿ ಆ ಘಳಿಗೆಗೆ ಊರುಕೇರಿಯೆಲ್ಲ ಹಬ್ಬಿತು. ಗೌಡನು ಸತ್ತ ಸಮಯದಲ್ಲೇ ಈ ಮಡಿವಾಳ ಅವನ ಮೈಲಿಗೆಯ ವಸ್ತ್ರ ತುಂಬಿ ತರಲು ಹೋಗಿದ್ದನಂತೆ. ತಳಾರರು ಯಜಮಾನನ ಸಾವಿನ ಮೂಲ ಹುಡುಕುವಲ್ಲಿ ಗೌಡತಿಯು, 'ಈ ಮಡಿವಾಳನು ಕಾಸಿನಾಸೆಗೆ ನನ್ನ ಗಂಡನಲ್ಲಿ ಜಗಳ ಹೂಡಿ ಕೊಂದನಲ್ಲೊ' ಅಂದು ಅತ್ತು ಇವನ ಮೇಲೆ ಮಣ್ಣು ತೂರಿದಳಂತೆ. ಯಾವಾಗಲೂ ನ್ಯಾಯವು ದೊಡ್ಡವರ ಪರವಾದುದರಿಂದ ಈ ಮಡಿವಾಳಿ ಸೆರೆಮನೆ ಸೇರಿ ಎಷ್ಟೋ ವರ್ಷಗಳಾದವು. ಊರುಕೇರಿ, ಸಂಸಾರದ ನೆನಪಾದಾಗಲೆಲ್ಲ ಇತ್ತ ದೇವರಿಗೆ ಬೆನ್ನು ಹಾಕಿ ತನ್ನ ಕತೆಯನ್ನು ಮರದ ಬುಡಕ್ಕೆ ಹೇಳುತ್ತ ಅವನೇ ನಗುವನು, ಅಳುವನು, ಮರದ ಸುತ್ತ ಕುಣಿಯುವನು, ಮಂಗನಂತೆ ಮರಹತ್ತಿ ಕೂತುಬಿಡುವನು, ಬೇವಿನ ಎಲೆ ತರೆದು ಬಾಯಿ ತುಂಬ ಜಗಿಯುವನು. ಆಗ ಯಾರಾದರೂ ಅವನನ್ನು ಸಮಾಧಾನವಾಗಿಸಲು ಹೋದಲ್ಲಿ ಅವರನ್ನೇ ತಬ್ಬಿ, 'ಅಯ್ಯೋ ನನ್ನ ಕೂಸೇ, ಇಷ್ಟು ವರ್ಷ ಎಲ್ಲಿ ಹೋಗಿದ್ದೆ, ಈಗ ಬಂದೆಯಾ, ಬಾ ಕಂದ ಬಾ ಅನ್ನುವನು' ಎಂಬ ಕತೆ ಹೇಳಿದನು...

★★★

ಅಲ್ಲೊಬ್ಬಳು ಸ್ತ್ರೀ ಗುಡಿಯ ಪ್ರಾಂಗಣಕ್ಕೆ ಗಾರೆ ಹೊರುತ್ತಿದ್ದವಳು ತನ್ನೊಂದಿಗೆ ಇದ್ದ ಇತರ ಹೆಂಗಸರೊಡನೆ ಜಗಳ ತೆಗೆದಿದ್ದಳು. ಸ್ತ್ರೀ ಸಮೂಹದ ಈ ಬಾಯಿ ಬಡುಕುತನವನ್ನು ಕಂಡು ಪ್ರಭುಗಳು ಅಮಾತ್ಯರತ್ತ, 'ಎಲಾ ನಮ್ಮ ಅರಮನೆಯ ಅಂತಃಪುರದ ರಾಣಿಯರ ಅಂತಃಕಲಹಕ್ಕಿಂತಲೂ ಮಿಗಿಲಾಗಿ ಇಲ್ಲಿ ಈ ಸೆರೆಮನೆಯ ಹೆಂಗಸರ ಕದನವು ಹೊತ್ತು ಹೋಗದ, ಎಂದೂ ಮುಗಿಯದ

